ಕೊಟ್ಟಿಲ್ಲ ಇದು ಬಹಳ ತೀವ್ರವಾಗಿದೆ. ಮಹಾರಾಷ್ಟ್ರ ರಾಜ್ಯದಲ್ಲಿ ಕಸ ಹಾಕುವುದಕ್ಕೆ ಗೋವಾದವರು 2 ಕೋಟಿ ರೂಪಾಯಿ ತೆಗೆದುಕೊಳ್ಳುತ್ತಿದ್ದಾರೆ. ನಮ್ಮಲ್ಲಿ ಏನೂ ಇಲ್ಲ ಆ ಪರಿಸ್ಥಿತಿ ಆಗಿದೆ. ತಾವು ಅದನ್ನೂ ಸಹ ಸೇರಿಸಿ ಹೇಳಬೇಕಾಗುತ್ತದೆ.

(ಇ) **ವಿಷಯ:** ಕಳಸಾ ನಾಲಾ ಮತ್ತು ಬಂಧೂರು ನಾಲಾ ತಿರುವು ಯೋಜನೆಗಳ ಬಗ್ಗೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಕೇಂದ್ರ ಸರ್ಕಾರವು ದಿನಾಂಕ: 22-3-2006ರ ಪತ್ರದಲ್ಲಿ ಮಹದಾಯಿ ನದಿಯ ಅಂತರ್ ರಾಜ್ಯ ನೀರಿನ ವಿವಾದದ ಬಗ್ಗೆ ಸಭೆಯನ್ನು ಕೇಂದ್ರ ಜಲ ಸಂಪನ್ಮೂಲ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 4-4-06ರಂದು ಬೆಳಿಗ್ಗೆ 11.00 ಗಂಟೆಗೆ ನವದೆಹಲಿಯಲ್ಲಿ ಅಂತರ್ ರಾಜ್ಯ ಸಭೆಯನ್ನು ಕರೆಯಲಾಗಿದೆಯೆಂದು ತಿಳಿಸಿ ಮುಖ್ಯಮಂತ್ರಿಗಳನ್ನು ಸದರಿ ಸಭೆಯಲ್ಲಿ ಭಾಗವಹಿಸುವಂತೆ ಕೋರಿದ್ದರು.

ಸದರಿ ಸಭೆಯಲ್ಲಿ ನಾನು, ಕಂದಾಯ ಸಚಿವರು, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಜಲಸಂಪನ್ಮೂಲ ಸಚಿವರು, ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆಯ ಹಿರಿಯ ಅಧಿಕಾರಿಗಳು ಮತ್ತು ತಾಂತ್ರಿಕ ಸಲಹೆಗಾರರುಗಳೊಂದಿಗೆ ಭಾಗವಹಿಸಿದ್ದೆವು.

ಸಭೆಯಲ್ಲಿ ಸಭಾಧ್ಯಕ್ಷರಾದ ಕೇಂದ್ರ ಜಲ ಸಂಪನ್ಮೂಲ ಸಚಿವರನ್ನು ಈ ಕೆಳಕಂಡಂತೆ ಮನವಿ ಮಾಡಿರುತ್ತೇನೆ:

1) ಕೇಂದ್ರ ಸರ್ಕಾರವು ದಿನಾಂಕ: 30-4-2002ರಂದು ಮಹದಾಯಿ ನದಿ ಪಾತ್ರದಿಂದ ಮಲಪ್ರಭಾ ಜಲಾಶಯಕ್ಕೆ 7.56 ಟಿ.ಎಂ.ಸಿ. ನೀರನ್ನು ವರ್ಗಾಯಿಸಲು ರಾಷ್ಟ್ರೀಯ ಜಲ ನೀತಿಯ ಆಧಾರದ ಮೇಲೆ ತಾತ್ವಿಕ ಅನುಮೋದನೆಯನ್ನು ನೀಡಿದೆ. ಗೋವಾ ಸರ್ಕಾರದ ಆಕ್ಷೇಪಣೆಯಿಂದಾಗಿ ಈ ಅನುಮೋದನೆಯನ್ನು ದಿನಾಂಕ:19-9-02ರಂದು ತಡೆಹಿಡಿದಿರುತ್ತದೆ.

2) ಕರ್ನಾಟಕ ರಾಜ್ಯದ ಜಲಾನಯನ ಪ್ರದೇಶದಿಂದ ಮಹದಾಯಿ ಕಣಿವೆಗೆ ಇಳುವರಿಯ ಸುಮಾರು 40-45 ಟಿ.ಎಂ.ಸಿ. ಇದೆ. ಸದರಿ ನದಿಯ ಉಗಮ ಸ್ಥಾನದಿಂದ ನದಿಯು ಸಮುದ್ರಕ್ಕೆ ಸೇರುವವರೆಗೆ ಲೆಕ್ಕ ಹಾಕಿರುವ ಇಳುವರಿಯ ಅಂದಾಜು ಸುಮಾರು 200 ಟಿ.ಎಂ.ಸಿ. ಆಗಿದ್ದು, ಸದ್ಯ ಅತ್ಯಲ್ಪ ಪ್ರಮಾಣದ ನೀರಿನ ಬಳಕೆಯನ್ನು ಹೊರತುಪಡಿಸಿ ಉಳಿದೆಲ್ಲ ನೀರು ಅರಬ್ಬೀ ಸಮುದ್ರಕ್ಕೆ ವ್ಯರ್ಥವಾಗಿ ಹರಿದು ಹೋಗುತ್ತಿದೆ.

3) ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳು, ಸುತ್ತಮುತ್ತಲಿನ ಪ್ರದೇಶಗಳು ಮತ್ತು ಮಲಪ್ರಭಾ ಜಲಾಶಯದ ಕೆಳಗಿರುವ ಇತರೆ ತಾಲ್ಲೂಕುಗಳಲ್ಲಿ

ಕುಡಿಯುವ ನೀರಿನ ತೀವ್ರ ಕೊರತೆಯಿರುತ್ತದೆ. ಈ ಪ್ರದೇಶಗಳಲ್ಲಿ ಕೊರತೆ ಎಷ್ಟಿರುತ್ತದೆಯೆಂದರೆ ಅಲ್ಲಿನ ಜನಗಳಿಗೆ 10 ದಿನಗಳಿಗೆ ಒಮ್ಮೆಯೂ ಕುಡಿಯುವ ನೀರನ್ನು ಒದಗಿಸಲು ಕಷ್ಟಸಾಧ್ಯವಾಗುತ್ತಿದೆ. ಮಲಪ್ರಭಾ ಜಲಾಶಯಕ್ಕೆ ಸಾಕಾಗುವಷ್ಟು ನೀರು ಹರಿದುಬರದೇ ಇದ್ದು, ಡ್ಯಾಂ ನಿರ್ಮಾಣದಿಂದ ಇಲ್ಲಿಯವರೆಗೆ ಕೇವಲ 4 ಬಾರಿ ಮಾತ್ರ ತುಂಬಿರುತ್ತದೆ. ಹುಬ್ಬಳ್ಳಿ–ಧಾರವಾಡ ಅವಳಿ ನಗರಗಳ ಜನತೆಗೆ ಕುಡಿಯುವ ನೀರನ್ನು ಒದಗಿಸುವುದು ತುಂಬಾ ಅವಶ್ಯಕವಾಗಿದೆ. ಮಲಪ್ರಭಾ ಕಣಿವೆಯ ಕೊರತೆಯಿರುವ ಕಣಿವೆಯಾಗಿದ್ದು, ಹೆಚ್ಚುವರಿ ನೀರಿರುವ ಮಹದಾಯಿ ಕಣಿವೆಯಿಂದ ಅಂತರ್ ಕಣಿವೆ ನೀರಿನ ವರ್ಗಾವಣೆ ಮಾಡುವುದು ತುಂಬಾ ಅವಶ್ಯಕವಾಗಿದೆ.

ಗೋವಾ ರಾಜ್ಯವು ಈ ಕೆಳಕಂಡ 2 ಮುಖ್ಯ ಅಂಶಗಳ ಮೇಲೆ ಮಹದಾಯಿ ತಿರುವು ಯೋಜನೆಯನ್ನು ಆಕ್ಷೇಪಿಸುತ್ತಿದೆ:

ಅ. ಮಹದಾಯಿ ಕಣಿವೆಯು ನೀರಿನ ಕೊರತೆಯ ಕಣಿವೆಯಾಗಿದ್ದು, ಇಲ್ಲಿಂದ ವರ್ಗಾವಣೆಗೆ ಗೋವಾ ರಾಜ್ಯದ ಸಮ್ಮತಿಯಿಲ್ಲವೆಂದು.

ಆ. ಮಹದಾಯಿ ತಿರುವು ಯೋಜನೆಯಿಂದ ಪರಿಸರ ಮತ್ತು ಜೀವ ಸಂಕುಲಕ್ಕೆ ಧಕ್ಕೆಯಾಗುತ್ತದೆ.

ಹಿಂದಿನ ಅಂತರ ರಾಜ್ಯ ಸಭೆಯನ್ನು ದಿನಾಂಕ: 20–12–2002 ರಂದು ಕೇಂದ್ರ ಸರ್ಕಾರದ ಜಲ ಸಂಪನ್ಮೂಲ ಸಚಿವರು ಜರುಗಿಸಿರುತ್ತಾರೆ. ಈ ಸಭೆಯಲ್ಲಿ ಸುಧೀರ್ಘ ಚರ್ಚೆಯ ನಂತರ ದಿನಾಂಕ: 31–3–2003ರೊಳಗಾಗಿ ನೀರಿನ ಇಳುವರಿಯ ಅಧ್ಯಯನ ಮತ್ತು ಹೊಂದಾಣಿಕೆಯನ್ನು ಪೂರ್ಣಗೊಳಿಸಲು ನಿರ್ಧರಿಸಲಾಗಿದೆ. ಕೇಂದ್ರ ಜಲ ಆಯೋಗದಿಂದ ಸದರಿ ಅಧ್ಯಯನದ ವರದಿಯ ಕೇಂದ್ರ ಸರ್ಕಾರದ ಜಲ ಸಂಪನ್ಮೂಲ ಮಂತ್ರಾಲಯಕ್ಕೆ ಸಲ್ಲಿಸಿರುವುದಾಗಿ ತಿಳಿದುಬಂದಿದೆ.

ದಿನಾಂಕ: 4–4–2006ರಂದು ಜರುಗಿದ ಅಂತರ್ ರಾಜ್ಯ ಸಭೆಯಲ್ಲಿ ನಾನು ಈ ಕೆಳಕಂಡ 5 ಅಂಶಗಳನ್ನು ಪರಿಗಣನೆಗಾಗಿ ಮಂಡಿಸಿರುತ್ತೇನೆ:

1. ನ್ಯಾಯಾಧಿಕರಣದ ತೀರ್ಪನ್ನು ನೀಡಲು ಹೆಚ್ಚಿನ ಸಮಯ ಬೇಕಾಗುವುದರಿಂದ ಇದು ಕಣಿವೆ ರಾಜ್ಯಗಳ ಹಿತಾಸಕ್ತಿಗೆ ಸೂಕ್ತವಾಗುವುದಿಲ್ಲ. ಕರ್ನಾಟಕ ರಾಜ್ಯವು ಸಂಧಾನದ ಮೂಲಕ ಬಗೆಹರಿಸಿಕೊಳ್ಳಲು ಒಲವು ವ್ಯಕ್ತಪಡಿಸುತ್ತದೆ.
2. ಕುಡಿಯುವ ನೀರಿನ ತೀವ್ರ ಸಮಸ್ಯೆಯನ್ನು ಪರಿಹರಿಸಲು 7.56 ಟಿ.ಎಂ.ಸಿ. ನೀರಿನ ಬಳಕೆಯ ಕಳಸಾ ನಾಲಾ ಮತ್ತು ಬಂಧೂರು ನಾಲಾ ತಿರುವು ಯೋಜನೆಗಳನ್ನು ರಾಜ್ಯದಿಂದ ಕೈಗೆತ್ತಿಕೊಳ್ಳಲು ಅನುಮತಿ ನೀಡಬೇಕು.

3. ಮಳೆಗಾಲದ ಅವಧಿಯಲ್ಲಿ ಮಾತ್ರ ನೀರನ್ನು ವರ್ಗಾಯಿಸಲು ಉದ್ದೇಶಿಸಿದ್ದು, ಕಡಿಮೆ ನೀರು ಹರಿವಿನ ಸಮಯದಲ್ಲಿ ವರ್ಗಾಯಿಸಲು ಉದ್ದೇಶಿಸಿಲ್ಲ.
4. ರಾಷ್ಟ್ರದ ಜಲ ಸಂಪನ್ಮೂಲವು ವಿನಾ ಕಾರಣ ವ್ಯರ್ಥವಾಗುತ್ತಿದ್ದು, ಇದನ್ನು ಸಮರ್ಪಕವಾಗಿ ಬಳಸಿಕೊಳ್ಳುವುದು ಸೂಕ್ತ.
5. ನದಿ ಪಾತ್ರದ ರಾಜ್ಯಗಳ ಜನತೆಗೆ ಅನುವಾಗುವಂತೆ ಚರ್ಚೆಯ ಮತ್ತು ಸಂಧಾನದ ಮೂಲಕ ಪರಿಹಾರವನ್ನು ಕಂಡುಕೊಳ್ಳುವುದು ಸೂಕ್ತ.

ನ್ಯಾಯ ಸಮ್ಮತವಾದ ಪಾಲನ್ನು ನ್ಯಾಯಾಧಿಕರಣದ ಮೂಲಕ ಅಥವಾ ಸಂಧಾನದ ಮೂಲಕ ತೀರ್ಮಾನಿಸುವ ಪ್ರಕ್ರಿಯೆಯನ್ನು ಬಾಕಿ ಇಟ್ಟು ದಿನಾಂಕ: 19–9–2002ರ ತಡೆ ಆದೇಶವನ್ನು ತತ್‌ಕ್ಷಣವೇ ಹಿಂತೆಗೆದುಕೊಳ್ಳಬೇಕೆಂದು ಮತ್ತು ಈಗಾಗಲೇ ದಿನಾಂಕ: 30–4–02ರಂದು ನೀಡಲಾಗಿರುವ ತಾತ್ವಿಕ ಅನುಮೋದನೆಯನ್ನು ಮರು ಜಾರಿಗೆ ನೀಡಬೇಕೆಂದು ಕರ್ನಾಟಕ ರಾಜ್ಯದ ಜನತೆಯ ಪರವಾಗಿ ನಾನು ಸಭೆಯಲ್ಲಿ ಒತ್ತಾಯಿಸಿರುತ್ತೇನೆ.

ರಾಜ್ಯದ ಕಂದಾಯ ಸಚಿವರು ಹಾಗು ಕಾನೂನು ಮತ್ತು ಸಂಸದೀಯ ಸಚಿವರು ಹುಬ್ಬಳ್ಳಿ–ಧಾರವಾಡ ನಗರಗಳ ಕುಡಿಯುವ ನೀರಿನ ತೀವ್ರ ಸಮಸ್ಯೆಯನ್ನು ಸಭೆಯ ಗಮನಕ್ಕೆ ತಂದಿರುತ್ತಾರೆ. ಕೇಂದ್ರ ಸರ್ಕಾರದ ತಡೆಯಾಜ್ಞೆಯನ್ನು ಕೂಡಲೇ ಹಿಂತೆಗೆದುಕೊಂಡು, ಈಗಾಗಲೇ ನೀಡಿರುವ ತಾತ್ವಿಕ ಅನುಮೋದನೆಯನ್ನು ಮರು ಜಾರಿಗೆ ನೀಡುವಂತೆ ರಾಜ್ಯ ಸರ್ಕಾರದಿಂದ ಒತ್ತಾಯಿಸಲಾಗಿದೆ.

ಆದರೆ ಸಭೆಯಲ್ಲಿ ಗೋವಾ ಸರ್ಕಾರವು ತನ್ನ ಹಿಂದಿನ ಎಲ್ಲಾ ಆಕ್ಷೇಪಣೆಗಳನ್ನು ಪುನರುಚ್ಚರಿಸುತ್ತಾ, ತನ್ನ ಮೊಂಡು ವಾದವನ್ನು ಮುಂದುವರಿಸಿ ಅದು ಈಗಾಗಲೇ 3 ವರ್ಷಗಳ ಹಿಂದೆಯೇ ಕೋರಿರುವಂತೆ ನ್ಯಾಯಾಧಿಕರಣವನ್ನು ರಚಿಸಲು ಕೋರಿದೆ. ಗೋವಾ ಸರ್ಕಾರವು ಕೇಂದ್ರ ಜಲ ಆಯೋಗದ ಅಂಕಿ ಅಂಶಗಳನ್ನು ಸಹ ಪ್ರಶ್ನಿಸಿರುತ್ತದೆ. ಗೋವಾ ಸರ್ಕಾರವು ಕರ್ನಾಟಕ ರಾಜ್ಯದ ನಿಲುವಾದ ನ್ಯಾಯ ಸಮ್ಮತವಾದ ಪಾಲನ್ನು ನ್ಯಾಯಾಧಿಕರಣದ ಮೂಲಕ ಅಥವಾ ಸಂಧಾನದ ತೀರ್ಮಾನಿಸುವ ಪ್ರಕ್ರಿಯೆಯನ್ನು ಬಾಕಿ ಇಟ್ಟು 7.56 ಟಿ.ಎಂ.ಸಿ. ನೀರಿನ ವರ್ಗಾವಣೆಗೆ ಪ್ರತಿರೋಧವನ್ನು ವ್ಯಕ್ತಪಡಿಸಿದೆ.

ಕೇಂದ್ರ ಸರ್ಕಾರದ ಜಲ ಸಂಪನ್ಮೂಲ ಸಚಿವರು ಇನ್ನು 15 ದಿನಗಳ ಒಳಗಾಗಿ ಗೋವಾ ರಾಜ್ಯದ ಮುಖ್ಯ ಮಂತ್ರಿಯವರೊಂದಿಗೆ ಪ್ರತ್ಯೇಕವಾಗಿ ಮಾತನಾಡಿ ತೀರ್ಮಾನವನ್ನು ತೆಗೆದುಕೊಳ್ಳುವುದಾಗಿ ಹೇಳಿರುತ್ತಾರೆ.

ಕೇಂದ್ರ ಜಲಸಂಪನ್ಮೂಲ ಸಚಿವರು ಆ ಒಂದು ಸಭೆಯಲ್ಲಿ ಎಲ್ಲಾ ರಾಜ್ಯಗಳೂ ಒಂದು ಸೌಹಾರ್ದಯುತವಾಗಿ ಸಮಸ್ಯೆ ಬಗೆಹರಿಸಿಕೊಳ್ಳುವುದು ಸೂಕ್ತ ಎನ್ನುವುದನ್ನು ಆ ಸಭೆಯಲ್ಲಿ ತಿಳಿಸಿದ್ದಾರೆ. ನನಗೆ ಈ ವಿಷಯದಲ್ಲಿ ಏನು ಸದನದ ಕೆಲವು ಸದಸ್ಯರುಗಳಲ್ಲಿ

ಹಿರಿಯ ಸದಸ್ಯರುಗಳಲ್ಲಿ ಹಾಗೂ ಎಲ್ಲಾ ಸರ್ವ ಪಕ್ಷಗಳ ಒಂದು ಸಭೆಯನ್ನು ಕರೆಯಬೇಕು ಎನ್ನುವಂತಹ ಒಂದು ಭಾವನೆ ಇದೆ. ಹಿಂದೆ ಸರ್ವ ಪಕ್ಷಗಳ ನಿಯೋಗವನ್ನು ಹಲವಾರು ಬಾರಿ ನಮ್ಮ ಸರ್ಕಾರದ ಹಿಂದಿನ ಮುಖ್ಯಮಂತ್ರಿಗಳು ತಮ್ಮ ಜೊತೆಯಲ್ಲಿ ಕರೆದುಕೊಂಡು ಹೋದರು. ಕರೆದುಕೊಂಡು ಹೋಗಿ ನಮ್ಮ ವಾದವನ್ನು ಅಲ್ಲಿ ಸರ್ವ ಪಕ್ಷಗಳ ಸದಸ್ಯರು ಮಂಡನೆ ಮಾಡಿದ್ದರು. ಅದಾದ ನಂತರ ಅವರು ತೀರ್ಪನ್ನು ಕೊಡದೇ ಆ ಬಗ್ಗೆ ಗಮನ ಹರಿಸದೇ, ಹಾಗೆಯೇ ತಡೆ ಆಜ್ಞೆಯನ್ನು ತೆರವೇನೂ ಗೊಳಿಸಿರಲಿಲ್ಲ. ಆ ವಿಷಯದಲ್ಲಿ ನಾನು ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದಾಗ ಈ ವಿಷಯವನ್ನು ಅವರ ಗಮನಕ್ಕೂ ತಂದಿದ್ದೆ. ಜಲ ಸಂಪನ್ಮೂಲ ಸಚಿವರಿಗೆ ನಾನೇ ವೈಯಕ್ತಿಕವಾಗಿ ಮನವಿ ಮಾಡಿದ್ದೆ. ಆ ಮನವಿಯ ಮೇಲೆ ಅವರು ಒಂದು ಸಭೆಯನ್ನು ಮೊನ್ನೆ ಕರೆದಿದ್ದರು. ಆ ಸಭೆಯಲ್ಲಿ ಮತ್ತೆ ಗೋವಾ ಸರ್ಕಾರ ಈ ವಿಷಯದಲ್ಲಿ ನಮಗೆ ನೀರನ್ನು ಕೊಡತಕ್ಕದ್ದಕ್ಕೆ ಮತ್ತೆ ಒಂದು ಆಕ್ಷೇಪವನ್ನು ವ್ಯಕ್ತಪಡಿಸಿದ್ದಾರೆ. ಅವರು ಕೇಂದ್ರ ಸರ್ಕಾರದ ಜಲಸಂಪನ್ಮೂಲ ಖಾತೆಯ ಬಗ್ಗೆನೇ ಅನುಮಾನಗಳನ್ನು ವ್ಯಕ್ತಪಡಿಸಿ ಮಾತನಾಡಿದ್ದಾರೆ. ಆದರೆ ಒಂದು ಜಲಸಂಪನ್ಮೂಲ ಇಲಾಖೆಯ ಸಚಿವರು "ನನಗೆ 15 ದಿವಸ ಕಾಲಾವಕಾಶವನ್ನು ಕೊಡಿ" ಎಂದು ನಮ್ಮಲ್ಲಿ ಕೇಳಿದ್ದಾರೆ. ಮತ್ತೊಮ್ಮೆ ನಾವು ಸರ್ವ ಪಕ್ಷಗಳ ನಿಯೋಗ ಹೋಗಬೇಕೆಂದು ಸದನ ತೀರ್ಮಾನ ಮಾಡಿದರೆ ನಾವು 15 ದಿವಸಗಳ ಒಳಗೆ ಒಂದು ನಿಯೋಗ ಹೋಗಬೇಕು. ಅವಶ್ಯಕತೆ ಇದ್ದರೆ ನಾವೆಲ್ಲ ಕರೆದುಕೊಂಡು ಹೋಗತಕ್ಕದ್ದಕ್ಕೆ ಸದನ ತೀರ್ಮಾನ ಮಾಡಿದರೆ, ಇನ್ನೊಮ್ಮೆ ಬಾರಿ ನಾವು ಪ್ರಧಾನ ಮಂತ್ರಿಗಳನ್ನು, ಹಾಗೂ ಜಲಸಂಪನ್ಮೂಲ ಸಚಿವರನ್ನು ಭೇಟಿ ಮಾಡತಕ್ಕ ತೀರ್ಮಾನವನ್ನು ಮಾಡೋಣ ಎಂದು ಹೇಳುತ್ತೇನೆ. ಹಿಂದೆ ಏನು ತಾವುಗಳು ಮುಖ್ಯಮಂತ್ರಿ ಆಗಿದ್ದಾಗ ಯಾವ ರೀತಿ ನೀವು ಆ ಒಂದು ವಿಷಯದಲ್ಲಿ ಕಾಳಜಿಯನ್ನು ವಹಿಸಿದ್ದೀರಿ ಅದನ್ನು ಮುಂದುವರಿಸಿದ್ದೇನೆಯೇ ಹೊರತು ನಾನು ವಿರೋಧ ಪಕ್ಷದ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ ಎನ್ನುವಂತಹ ಭಾವನೆ ತಮ್ಮಲ್ಲಿ ಏನಾದರೂ ಇದ್ದರೆ ದಯವಿಟ್ಟು ಆ ರೀತಿಯ ಭಾವನೆ ಸರಿಯಿಲ್ಲ ಎಂಬ ವಿಚಾರವನ್ನು ಸದನದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಆಯಿತು.

ಶ್ರೀ ವಾಟಾಳ್ ನಾಗರಾಜ್ : ತ್ಯಾಜ್ಯ ವಸ್ತುಗಳ ಬಗ್ಗೆ ನೀವು ಉತ್ತರ ಹೇಳಲಿಲ್ಲ.

ಶ್ರೀ ಎನ್. ಧರ್ಮಸಿಂಗ್ (ಮಾನ್ಯ ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ಸರ್ವ ಪಕ್ಷಗಳ ನಿಯೋಗ ಏಕೆ ಹೋಗಬೇಕು ಎನ್ನತಕ್ಕದ್ದನ್ನು ನಾನು ಹೇಳಿದ್ದೆ. ಇದು ಸೈಕಲಾಜಿಕಲ್. ಎಲ್ಲಾ ಪಕ್ಷಗಳ ಜೊತೆ ಕೂತು ತಮ್ಮ ತಮ್ಮ ವಾದವನ್ನು ಹೇಳುತ್ತಾರೆ. ನಾವು ಯಾವಾಗ ಹೋದಾಗಲೂ ಸಹ ಮಾನ್ಯ ಅನಂತ ಕುಮಾರ್ ಹಾಗೂ ಮಾನ್ಯ ಯಡಿಯೂರಪ್ಪನವರು ಪ್ರೈಮ್ ಮಿನಿಸ್ಟರ್ ಜೊತೆಯಲ್ಲಿ ಮಾತನಾಡಿಸಿದ್ದೆ. ಇವತ್ತು

ಮೂರು ರಾಜ್ಯಗಳ ಮುಖ್ಯ ಮಂತ್ರಿಗಳ ಸಭೆ ಆಯಿತು. ಮಹಾರಾಷ್ಟ್ರದವರು ಕೂಡ ಅದಕ್ಕೆ ಸಪೋರ್ಟ್ ಮಾಡಿದ್ದಾರೆ. ಇವತ್ತು ನೀವು ಸುಪ್ರೀಂ ಕೋರ್ಟಿಗೆ ಹೋದರೆ ಅವರು ನೀವು ಟ್ರಿಬ್ಯೂನಲ್ಗೆ ಹೋಗಿ ಎಂದು ಅವರು ಹೇಳುತ್ತಾರೆ. ಇವತ್ತೇನಾಗಿದೆ? ಇದೇ ರೀತಿಯಾದ ಒಂದು ಪ್ರಶ್ನೆ ಬಂದಾಗ ಆಂಧ್ರಪ್ರದೇಶದಿಂದ 7.5 ಟಿ.ಎಂ.ಸಿ. ಯಷ್ಟು ನೀರನ್ನು ತಮಿಳುನಾಡಿಗೆ ಬಿಟ್ಟಿದ್ದಾರೆ. ಇವತ್ತು ಕುಡಿಯುವ ನೀರಿನ ಬಗ್ಗೆ ಆ ಬೇಸಿಸ್ ಮೇಲೆ ಒಂದು ಸ್ಟೇ ಕೊಟ್ಟು ಬಿಟ್ಟರು. ಆಗಿನ ಸರ್ಕಾರದಲ್ಲಿ ಒಂದೇ ಸರ್ಕಾರ ಇತ್ತು. ಗೋವಾದಲ್ಲಿ ಕೂಡ ಇತ್ತು ಮತ್ತು ಎಸ್ಡಿಎ ಗವರ್ನಮೆಂಟ್ ಕೂಡ ಇತ್ತು. ಮೊದಲು ನೀರು ಕೊಟ್ಟರು. ನಂತರ ಸ್ಟೇ ಕೊಟ್ಟರು. We have requested the Prime Minister, "Sir, you have to please vacate the stay" ಎಂದು ಇವತ್ತು ಬೆಳಗಾಂನಲ್ಲಿ, ಹುಬ್ಬಳ್ಳಿ-ಧಾರವಾಡದಲ್ಲಿ ಡ್ರಿಂಕಿಂಗ್ ವಾಟರ್ ಪ್ರಾಬ್ಲಮ್ ಇದೆ. ಅಲ್ಲಿ ನೀರು ಹರಿದು ಏನು ಸಮುದ್ರಕ್ಕೆ ಹೋಗುತ್ತಿದೆ. ಅದಕ್ಕೆ ನಮಗೆ ಕೊಡಬೇಕು ಎನ್ನತಕ್ಕ ವಿಚಾರವನ್ನು ಮಾನ್ಯ ಜಗದೀಶ್ ಶೆಟ್ಟರ್ ಅವರು ಪ್ರತಿಪಾದನೆ ಮಾಡಿದ್ದಾರೆ. ಅವರೂ ಕೂಡ ಆ ಸಂದರ್ಭದಲ್ಲಿದ್ದರು. ಸರ್ವ ಪಕ್ಷದ ಅಭಿಪ್ರಾಯ ಎಂದರೆ ಇಂತಹ ಒಂದು ಸೂಕ್ಷ್ಮವಾದ ವಿಚಾರದಲ್ಲಿ ತಾವು ದೆಹಲಿಗೆ ಹೋಗುವುದರಲ್ಲಿ ಅಭ್ಯಂತರ ಇಲ್ಲ. ಮುಖ್ಯಮಂತ್ರಿಗಳ ಸಭೆಗೆ ಹೋಗಿದ್ದೀರಿ. ಹೋಗುವುದಕ್ಕಿಂತ ಮುಂಚೆ ಈ ಪ್ರಶ್ನೆ ಬಂದಾಗ ಏನು ನಮ್ಮ ವಾದ ಇಡಬೇಕು? ತಾವು ಕೂಡ ನಮ್ಮೆಲ್ಲರನ್ನೂ ಕರೆಸಬೇಕು, ವಿಶ್ವಾಸದಲ್ಲಿ ತೆಗೆದುಕೊಳ್ಳಬೇಕು ಎಂದು ಈಗ ಹೇಳಿದಿರಿ. ನಮಗೇನೂ ಅಲ್ಲಿ ಹೋಗತಕ್ಕ ಆಸೆ ಇಲ್ಲ. ಆದರೆ ಇವತ್ತು ನೀರಿನ ಸಮಸ್ಯೆಯನ್ನು ಇತ್ಯರ್ಥ ಮಾಡತಕ್ಕದ್ದಕ್ಕೆ ಮಾನ್ಯ ಪ್ರಧಾನ ಮಂತ್ರಿಗಳು ಈ ಪ್ರಾಬ್ಲಮ್ ಸಾಲ್ವ್ ಮಾಡಬಹುದು. ಪ್ರಧಾನ ಮಂತ್ರಿಗಳ ತಲೆಯಲ್ಲಿ ಬಂದಿದೆ. ಮಾನ್ಯ ಪ್ರಧಾನ ಮಂತ್ರಿಗಳಲ್ಲಿ ಹೋಗಿ ನಾವು ಖುದ್ದಾಗಿ ಭೇಟಿ ಆದಾಗಲೂ ಕೂಡ ಒಂದು ಸಲ ಹೇಳಿದರು. ಸರ್ವ ಪಕ್ಷಗಳ ಡೆಲಿಗೇಷನ್ ಹೋದಾಗ ಸಂಬಂಧಪಟ್ಟಂತಹ ಉಸ್ತುವಾರಿ ನೋಡಿಕೊಳ್ಳುತ್ತಿದ್ದಂತಹ ಅಧಿಕಾರಿಯನ್ನು ಕರೆಸಿದ್ದರು. ಏಕೆ ನೀನು ನನಗೆ ರಿಮೈಂಡ್ ಮಾಡಲಿಲ್ಲ ಎಂದು ಹೇಳಿದ್ದಾರೆ. ತಾವು ಪ್ರಧಾನ ಮಂತ್ರಿಗಳ ಹತ್ತಿರ ಹೋಗಿದ್ದೀರಿ. ಅದಕ್ಕೆ ಇವತ್ತು ಕುಡಿಯುವ ನೀರಿನ ಸಮಸ್ಯೆ ಇದ್ದರೂ ಕೂಡ 7.5 ಟಿಎಂಸಿ ನೀರು ತಮಿಳುನಾಡಿಗೆ ಕೊಡಬೇಕೆಂದು ಆದೇಶ ಕೊಟ್ಟಿದ್ದಾರೆ. ಅದರ ಬಗ್ಗೆ ಮತ್ತೆ ಎಲ್ಲಾ ಸಮಾಲೋಚನೆ ಮಾಡಿ ಒಂದು ಒತ್ತಡವನ್ನು ತರತಕ್ಕ ರೀತಿಯಲ್ಲಿ ಯಾವಾಗಲೂ ಕೂಡ ಡೆಮಾಕ್ರಸಿ ಸೆಟ್ ಅಪ್‌ನಲ್ಲಿ ಪೊಲಿಟಿಕಲ್ ಪಾರ್ಟೀಸ್ ಕೆಲಸ ಮಾಡತಕ್ಕದ್ದು ಏನು ಇರುತ್ತದೆ, you have to take all people into confidence. ನಿಮಗೂ ಕೂಡ ಒಂದು ಬಲ ಬರುತ್ತದೆ. ಸ್ಟ್ರೆಂಥ್ ಬರುತ್ತದೆ. ಆಗ ಸರಿಯಾಗಿ ಆಗುತ್ತದೆನ್ನುವ ಮಾತನ್ನು ನಾನು ಹೇಳುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಇವತ್ತು ಏನು ಮತ್ತೊಮ್ಮೆ ಪ್ರಧಾನ ಮಂತ್ರಿಗಳನ್ನು

ಭೇಟಿ ಮಾಡುವುದಕ್ಕೆ ಎಲ್ಲರೂ ಹೋಗೋಣ ಎನ್ನುವ ಮಾತನ್ನು ಹೇಳಿದ್ದಾರೆ, ಇನ್ನು ಮುಂದಿನ ಐದಾರು ದಿವಸಗಳಲ್ಲೇ ಸರ್ವ ಪಕ್ಷಗಳ ನಿಯೋಗವನ್ನು ತೆಗೆದುಕೊಂಡು ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿ ಇವತ್ತು ತಮಿಳುನಾಡಿಗೆ ನೀರನ್ನು ಕೊಡ ತಕ್ಕ ಸಂದರ್ಭದಲ್ಲಿ ಕರ್ನಾಟಕ ರಾಜ್ಯವೂ ಆ ಸಂದರ್ಭದಲ್ಲೇನು ಕುಡಿಯುವ ನೀರಿಗೆ ತಮ್ಮ ಒಂದು ಪಾಲಿನ ನೀರನ್ನು ಕೊಡತಕ್ಕ ಔದಾರ್ಯವನ್ನೇನು ತೋರಿಸಿದ್ದೇವೆ, ಆ ಒಂದು ವಿಷಯವನ್ನು ಒಂದು ಕೇಂದ್ರ ಸರ್ಕಾರದ ಗಮನಕ್ಕೆ ಮತ್ತೊಮ್ಮೆ ತರುವುದರ ಮುಖಾಂತರ ಇವತ್ತು ಕುಡಿಯುವ ನೀರಿನ ಸಮಸ್ಯೆಗೆ ನಾವೇನು 7.56 ಟಿಎಂಸಿ ನೀರನ್ನು ಕೇಳುತ್ತಿದ್ದೇವೆ. ಇದಕ್ಕಾಗಿ ಆ ತಡೆಯಾಜ್ಞೆಯನ್ನು ತೆರವುಗೊಳಿಸಬೇಕು ಎನ್ನುವುದಕ್ಕೆ ಎಲ್ಲ ಒಂದು ನಿಯೋಗವನ್ನು ತೆಗೆದುಕೊಂಡು ಹೋಗುವುದರ ಮುಖಾಂತರ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಲು ತೀರ್ಮಾನವನ್ನು ಮಾಡೋಣವೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳೇ, ವಾಟಾಳ್ ನಾಗರಾಜ್‌ರವರು ಗೋವಾ ರಾಜ್ಯದವರು ತ್ಯಾಜ್ಯ ತಂದು ಹಾಕುತ್ತಿರುವ ಬಗ್ಗೆ ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಗೋವಾ ಸರ್ಕಾರ ಮೊದಲಿನಿಂದಲೂ ಕನ್ನಡಿಗರ ಮೇಲೆ ದ್ವೇಷವನ್ನು ಕಾರುತ್ತಿದ್ದಾರೆ. ಕನ್ನಡಿಗರನ್ನು ಹೊರಗೆ ಹಾಕಿದ್ದಾರೆ. ಮತ್ತು ತ್ಯಾಜ್ಯ ವಸ್ತುಗಳನ್ನು ತಂದು ನಮ್ಮ ರಾಜ್ಯದಲ್ಲಿ ಹಾಕುತ್ತಿದ್ದಾರೆ. ಏಕೊ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನವನ್ನು ಕೊಡುತ್ತಿಲ್ಲ. ಸರ್ಕಾರದ ನಿಲುವೇನು? ಏನು ಮಾಡುತ್ತೀರಿ? ಆ ಗಡಿ ಭಾಗದಲ್ಲಿ ಏನಾಗಿದೆ? ಯಾರು ನೋಡಿಕೊಳ್ಳತಕ್ಕವರು? ಕಸವನ್ನು ತಂದು ಇಲ್ಲಿ ಹಾಕುತ್ತಿದ್ದರೆ ಕೇಳುವ ಪ್ರಶ್ನೆ ಇಲ್ಲ. ಇದರ ಬಗ್ಗೆ ದಯವಿಟ್ಟು ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕು.

ಅಧ್ಯಕ್ಷರು : ಗೋವಾದ ಉತ್ತರವಾದ ಮೇಲೆ ಗೋಮಾಳದ ಬಗ್ಗೆ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಗೋವಾ ರಾಜ್ಯದಿಂದ ಕಸ ಇತ್ಯಾದಿಯನ್ನು ಕರ್ನಾಟಕ ರಾಜ್ಯ ಪ್ರದೇಶದಲ್ಲಿ ಎಸೆಯುತ್ತಿರುವ ಬಗ್ಗೆ ದಕ್ಷಿಣ ಗೋವಾದಲ್ಲಿರುವ ಮೆ: ಜೈನ್ ಉದ್ಯೋಗ ಲಿಮಿಟೆಡ್, ಉಕ್ಕಿನ ಕಾರ್ಖಾನೆಯವರು 50 ಸಿಮೆಂಟ್ ಚೀಲಗಳಲ್ಲಿ ಸಾಲಿಡ್ ಇಂಡಸ್ಟ್ರಿಯಲ್ ವೇಸ್ಟನ್ನು ಕಾರವಾರ ಜಿಲ್ಲೆಯ ಜೋಯಿಡಾ ತಾಲ್ಲೂಕಿನ ಹನುಮೋಡ, ರಾಮನಗರ ಗ್ರಾಮಗಳ ನಡುವೆ ಇರುವ ಎನ್‌ಹೆಚ್ 4ಎ ಎರಡೂ ಕಡೆ ಎಸೆದಿರುವುದು ನಿಜಸಂಗತಿಯಾಗಿರುತ್ತದೆ. ಕಾರವಾರದಲ್ಲಿರುವ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ದಿನಾಂಕ: 28-3-2006 ರಂದು ತನಿಖೆ ಮಾಡಿ ಗೋವಾ ಸರ್ಕಾರದ ಮಾಲಿನ್ಯ ನಿಯಂತ್ರಣ ಮಂಡಳಿಯವರಿಗೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ಇದರ ನಂತರ ಸದರಿ